All India Radio: Bangalore
National Bulletin In Kannada
16.11.2025 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><><>

ಮುಖ್ಯಾಂಶಗಳು

೧. ಆಹಾರ ಆಮದಿನ ಮೇಲಿನ ಸುಂಕ ಕಡಿತಗೊಳಿಸಿದ ಅಮೆರಿಕ; ಭಾರತದ ಮಾವು, ದಾಳಿಂಬೆ, ಚಹಾ ರಫ್ತುಗಳಿಗೆ ಪ್ರಯೋಜನ ಸಾಧ್ಯತೆ

೨. ಫ್ರಾನ್ಸ್‌ನಲ್ಲಿ ಇಂದಿನಿಂದ ನಡೆಯಲಿರುವ ಲನೇ ದ್ವಿಪಕ್ಷೀಯ ವಾಯು ಸಮಾರಾಭ್ಯಾಸ-ಗರುಡ ೨೫ ರಲ್ಲಿ ಭಾಗವಹಿಸಲಿರುವ ಭಾರತೀಯ ವಾಯುಪಡೆ

೩. ಕೇರಳದ ಪ್ರಸಿದ್ಧ ಶಬರಿಮಲೆ ಅಯ್ಯಪ್ಪ ದೇಗುಲ ಇಂದಿನಿಂದ ಭಕ್ತಿರಿಗೆ ಮುಕ್ತ - ದೇಗುಲ ಆಡಳಿತ ಮಂಡಳಿಯಿಂದ ಸಕಲ ಸಿದ್ಧತೆ.

೪. ಗುಜರಾತ್‌ನಲ್ಲಿ ೯ ಸಾವಿರದ ೭೦೦ ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಚಾಲನೆ

೫. ಟೆಸ್ಟ್ ಕ್ರಿಕೆಟ್; ಭಾರತದ ವಿರುದ್ಧ ಇಂದು ಎರಡನೇ ಇನ್ನಿಂಗ್ಸ್ ಮುಂದುವರಿಸಲಿರುವ ದಕ್ಷಿಣ ಆಫ್ರಿಕಾ

<><><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಹಾರ ಆಮದಿನ ಮೇಲಿನ ಸುಂಕವನ್ನು ಕಡಿತಗೊಳಿಸಿದ್ದಾರೆ. ಭಾರತದ ಮಾವು, ದಾಳಿಂಬೆ ಮತ್ತು ಚಹಾ ರಫ್ತುಗಳು ಈ ಕ್ರಮದಿಂದ ಪ್ರಯೋಜನಪಡೆಯುವ ಸಾಧ್ಯತೆಯಿದೆ. ಉ?ವಲಯದ ಹಣ್ಣು, ಚಹಾ ಮತ್ತು ಮಸಾಲೆ ಪದಾರ್ಥಗಳು ಪರಸ್ಪರ ಸುಂಕಗಳಿಂದ ಪ್ರಭಾವಿತವಾಗದ ಆಮದು ಪಟ್ಟಿಯಲ್ಲಿ ಸೇರಿವೆ ಎಂದು ಶ್ವೇತಭವನ ಘೋಷಿಸಿದೆ. ಶ್ವೇತಭವನದ ಫ್ಯಾಕ್ಟ್‌ಶೀಟ್‌ನಲ್ಲಿ ಉಲ್ಲೇಖಿಸಲಾದ ಇತರ ವಸ್ತುಗಳಲ್ಲಿ ಕಾಫಿ, ಚಹಾ, ಕೋಕೋ, ಕಿತ್ತಳೆ, ಟೊಮೆಟೊ ಸೇರಿವೆ. ಟ್ರಂಪ್ ಈ ಹಿಂದೆ ಭಾರತದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ೨೫ ಪ್ರತಿಶತದಷ್ಟು ಪರಸ್ಪರ ಸುಂಕಗಳನ್ನು ವಿಧಿಸಿದ್ದರು ಹಾಗೂ ಭಾರತ, ರ?ದಿಂದ ತೈಲವನ್ನು ಆಮದು ಮಾಡಿಕೊಂಡ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ೨೫ ಪ್ರತಿಶತ ದಂಡನಾತ್ಮಕ ಸುಂಕವನ್ನು ಸೇರಿಸಿದ್ದರು. ಹಣದುಬ್ಬರವನ್ನು ನಿಯಂತ್ರಿಸಲು, ಟ್ರಂಪ್ ಈ ಹಿಂದೆ ಜೆನೆರಿಕ್ ಔ?ಧಿಗಳನ್ನು ಸುಂಕಗಳಿಂದ ವಿನಾಯಿತಿ ನೀಡಿದ್ದರು. ಇದು ಭಾರತಕ್ಕೆ ಪ್ರಯೋಜನಕಾರಿಯಾಗಿತ್ತು.

<><><><>

ಭಾರತೀಯ ವಾಯುಪಡೆ ಇಂದಿನಿಂದ ಫ್ರಾನ್ಸ್‌ನಲ್ಲಿ ನಡೆಯಲಿರುವ ೮ನೇ ದ್ವಿಪಕ್ಷೀಯ ವಾಯು ಸಮಾರಾಭ್ಯಾಸ-ಗರುಡ ೨೫ ರಲ್ಲಿ ಭಾಗವಹಿಸಲಿದೆ. ಈ ಸಮಾರಾಭ್ಯಾಸವು, ಇದೇ ೨೭ರವರೆಗೆ ನಡೆಯಲಿದ್ದು, ಫ್ರಾನ್ಸ್‌ನ ಫ್ರೆಂಚ್ ವಾಯು ಮತ್ತು ಬಾಹ್ಯಾಕಾಶ ಪಡೆ ಇದರಲ್ಲಿ ಭಾಗವಹಿಸಲಿದೆ. ಸಮಾರಾಭ್ಯಾಸದ ಸಮಯದಲ್ಲಿ ಐಎಎಫ್‌ನ ಎಸ್‌ಯು-೩೦ಎಂಕೆಐ ವಿಮಾನವು ಫ್ರಾನ್ಸ್‌ನ ಯುದ್ಧ ವಿಮಾನಗಳೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಲಿದೆ. ಯುದ್ಧ ಸನ್ನಿವೇಶಗಳಲ್ಲಿ ಕಾರ್ಯನಿರ್ವಹಿಸುವುದು ಹಾಗೂ ವಾಯು ರಕ್ಷಣೆ ಮತ್ತು ಜಂಟಿ ಕಾರ್ಯಾಚರಣೆಗಳ ಸಮಯದಲ್ಲಿ ಕಾರ್ಯಕ್ಷಮತೆಯ ಮೇಲೆ ಈ ಸಮಾರಾಭ್ಯಾಸ ಕೇಂದ್ರೀಕರಿಸುತ್ತದೆ.

<><><><>

ಕೇರಳದ ಪ್ರಸಿದ್ಧ ಶಬರಿಮಲೆ ಅಯ್ಯಪ್ಪ ದೇವಸ್ಥಾನವು ಶುಭ ಮಂಡಲ-ಮಕರವಿಳಕ್ಕು ತೀರ್ಥಯಾತ್ರೆಗಾಗಿ ಇಂದು ತೆರೆಯಲಿದೆ. ಲಕ್ಷಾಂತರ ಯಾತ್ರಿಕರನ್ನು ಸ್ವಾಗತಿಸಲು ದೇವಾಲಯವು ಸಜ್ಜಾಗಿದೆ. ಅಂತಿಮ ಸಿದ್ಧತೆಗಳು ನಡೆಯುತ್ತಿವೆ. ಎರಡು ತಿಂಗಳ ಅವಧಿಯ ಮಂಡಲ-ಮಕರವಿಳಕ್ಕು ವಾರ್ಷಿಕ ತೀರ್ಥಯಾತ್ರೆಗಾಗಿ ಶಬರಿಮಲೆ ದೇವಸ್ಥಾನವು ಇಂದು ಸಂಜೆ ತೆರೆಯಲಿದೆ. ಮಲಯಾಳಂ ಮಾಸದ ವೃಶ್ಚಿಕಂ ಆರಂಭದೊಂದಿಗೆ ತೀರ್ಥಯಾತ್ರೆ ನಾಳೆ ಪ್ರಾರಂಭವಾಗುತ್ತದೆ. ವರ್ಚುವಲ್ ಕ್ಯೂ ವ್ಯವಸ್ಥೆ ಸಕ್ರಿಯವಾಗಿದೆ ಮತ್ತು ಸ್ಪಾಟ್-ಬುಕಿಂಗ್ ಕೌಂಟರ್‌ಗಳನ್ನು ಸಜ್ಜಾಗೊಳಿಸಲಾಗಿದೆ. ಪ್ರತಿದಿನ ೯೦ ಸಾವಿರ ದರ್ಶನ ಸ್ಲಾಟ್‌ಗಳು ಲಭ್ಯವಿರುತ್ತವೆ, ಅದರಲ್ಲಿ ೭೦ ಸಾವಿರ  ಆನ್‌ಲೈನ್ ಬುಕಿಂಗ್ ಮೂಲಕ ಮತ್ತು ೨೦ ಸಾವರ ಸ್ಪಾಟ್ ಬುಕಿಂಗ್ ಮೂಲಕ, ಸುಗಮ ಜನಸಂದಣಿ ನಿರ್ವಹಣೆಯನ್ನು ಖಚಿತಪಡಿಸುತ್ತವೆ. ಪಂಪಾದಿಂದ ಸನ್ನಿಧಾನಕ್ಕೆ ಚಾರಣ ಮಾರ್ಗದಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಬಲಪಡಿಸಲಾಗಿದೆ. ಪೊಲೀಸರು, ದೇವಸ್ವಂ ಸಿಬ್ಬಂದಿ ಮತ್ತು ಸ್ವಯಂಸೇವಕರು ಸ್ಥಳದಲ್ಲಿ ಇರಲಿದ್ದಾರೆ. ಡಿಸೆಂಬರ್ ೨೭ ರಂದು ಮಂಡಲಪೂಜೆ ನಡೆಯಲಿದೆ ಮತ್ತು ಜನವರಿ ೧೪ ರಂದು ಮಕರವಿಳಕ್ಕು ಉತ್ಸವ ನಡೆಯಲಿದೆ.

<><><><>

ಗುಜರಾತ್‌ನ ಬುಡಕಟ್ಟು ಪ್ರಾಬಲ್ಯದ ನರ್ಮದಾ ಜಿಲ್ಲೆಯ ದೇಡಿಯಾಪದ ಪಟ್ಟಣದಲ್ಲಿ ನಿನ್ನೆ ೯ ಸಾವಿರದ ೭೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿ, ಶಿಲಾನ್ಯಾಸ ನೇರವೇರಿಸಿದರು.  ಈ ಯೋಜನೆಗಳು ಮೂಲಸೌಕರ್ಯ, ಆರೋಗ್ಯ, ಶಿಕ್ಷಣ ಮತ್ತು ಪರಂಪರೆಯ ಮೇಲೆ ಕೇಂದ್ರೀಕರಿಸುತ್ತವೆ. ವಿಶೇಷವಾಗಿ ಬುಡಕಟ್ಟು ಸಬಲೀಕರಣಕ್ಕೆ ಒತ್ತು ನೀಡುತ್ತವೆ. ಬುಡಕಟ್ಟು ನಾಯಕ ಮತ್ತು ಸ್ವಾತಂತ್ರ್ಯ ಹೋರಾಟಗಾರ ಭಗವಾನ್ ಬಿರ್ಸಾ ಮುಂಡಾ ಅವರ ೧೫೦ನೇ ಜನ್ಮ ದಿನಾಚರಣೆಯ ಗುರುತಿಸುವ ಜನ ಜಾತಿಯ ಗೌರವ ದಿವಸ್ ಸಂದರ್ಭದಲ್ಲಿ ಈ ಯೋಜನೆಗಳನ್ನು ಪ್ರಾರಂಭಿಸಲಾಗಿದೆ.  ಈ ವೇಳೆ, ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ

ಮೋದಿ, ಬುಡಕಟ್ಟು ಸಮುದಾಯವು ಸಾವಿರಾರು ವರ್ಷಗಳಿಂದ ಭಾರತದ ಪ್ರಜ್ಞೆಯ ಅವಿಭಾಜ್ಯ ಅಂಗವಾಗಿದೆ. ದೇಶದ ಗೌರವ, ಸ್ವಾಭಿಮಾನ ಮತ್ತು ಸ್ವ-ಆಡಳಿತದ ಪ್ರಶ್ನೆ ಉದ್ಭವಿಸಿದಾಗಲೆಲ್ಲ, ಭಾರತದ ಬುಡಕಟ್ಟು ಸಮುದಾಯ ಮುಂಚೂಣಿಯಲ್ಲಿದೆ. ಸ್ವಾತಂತ್ರ್ಯ ಚಳವಳಿಯಲ್ಲಿ ಬುಡಕಟ್ಟು ಸಮಾಜದ ಕೊಡುಗೆಯನ್ನು ದೇಶ ಎಂದೂ ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

<><><>

ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು, ನವೆಂಬರ್ ೧೮ ರಂದು ಅಮೃತಸರದ ಗುರುನಾನಕ್ ದೇವ್ ವಿಶ್ವವಿದ್ಯಾಲಯದಲ್ಲಿ ನಶಾ ಮುಕ್ತ ಭಾರತ ಅಭಿಯಾನದ ಐದು ವ?ಗಳನ್ನು ಆಚರಿಸುವ ಬೃಹತ್ ಸಮಾರೋಪ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಪಂಜಾಬ್ ರಾಜ್ಯಪಾಲರು ಮತ್ತು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ಸಚಿವರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಸುಮಾರು ೭ ಸಾವಿರ ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಯುವಜನರು ಮತ್ತು ನಾಗರಿಕರು ಮಾದಕ ದ್ರವ್ಯಗಳಿಂದ ದೂರವಿರಲು ಮತ್ತು ಆರೋಗ್ಯಕರ, ಮೌಲ್ಯಾಧಾರಿತ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇದು ಸಮುದಾಯದ ಭಾಗವಹಿಸುವಿಕೆಯನ್ನು ಉತ್ತೇಜಿಸುವುದಲ್ಲದೆ, ಮಾದಕ ದ್ರವ್ಯ ಮುಕ್ತ ಸಮಾಜವನ್ನು ನಿರ್ಮಿಸುವ ಕಡೆಗೆ ಸಾಮೂಹಿಕ ಪ್ರಯತ್ನಗಳನ್ನು ಬಲಪಡಿಸುತ್ತದೆ. ನಶೆ ತಡೆಗಟ್ಟುವಿಕೆ, ಚಿಕಿತ್ಸೆ ಮತ್ತು ಪುನರ್ವಸತಿ ಒಳಗೊಂಡ ಮೂರು-ಹಂತದ ಕಾರ್ಯತಂತ್ರದ ಮೂಲಕ ಮಾದಕ ದ್ರವ್ಯ ಸೇವನೆಯ ಸಮಸ್ಯೆಯನ್ನು ಪರಿಹರಿಸಲು ಈ ಹಿಂದೆ ನಶೆ ಮುಕ್ತ ಭಾರತ ಅಭಿಯಾನವನ್ನು ಆಗಸ್ಟ್ ೧೫, ೨೦೨೦ ರಂದು ಪ್ರಾರಂಭಿಸಲಾಗಿತ್ತು.

<><><>

ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಕ್ಕಾಗಿ ಭಾರತೀಯ ಜನತಾ ಪಕ್ಷವು ಮಾಜಿ ಕೇಂದ್ರ ಸಚಿವ ಮತ್ತು ಪಕ್ಷದ ಹಿರಿಯ ನಾಯಕ ಆರ್.ಕೆ. ಸಿಂಗ್ ಅವರನ್ನು ಆರು ವರ್ಷಗಳ ಕಾಲ ಪಕ್ಷದಿಂದ ಅಮಾನತುಗೊಳಿಸಿದೆ. ಪಕ್ಷವು, ಆರ್.ಕೆ. ಸಿಂಗ್ ಅವರಿಗೆ ಶೋ-ಕಾಸ್ ನೋಟಿಸ್ ಸಹ ನೀಡಿದ್ದು, ಕಳೆದ ಕೆಲವು ದಿನಗಳಿಂದ ಅವರು ಪಕ್ಷದ ನಾಯಕತ್ವದ ನಿರ್ಧಾರಗಳಿಗೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದರು ಮತ್ತು ಎನ್‌ಡಿಎ ಮೈತ್ರಿಕೂಟದ ವಿರುದ್ಧವೂ ಮಾತನಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಅವರನ್ನು ಅಮಾನತುಗೊಳಿಸಲಾಗಿದೆ.

<><><>

ಭಾರತ-ಕೊರಿಯಾ ಸಹಕಾರ ಮಾದರಿಯ ಹಡಗು ನಿರ್ಮಾಣವು ಭಾರತದ ಬೆಳೆಯುತ್ತಿರುವ ಅಗತ್ಯಗಳನ್ನು ಪೂರೈಸುವುದು ಮಾತ್ರವಲ್ಲದೆ ಜಾಗತಿಕ ಮಾರುಕಟ್ಟೆಗಳಿಗೂ ಸೇವೆ ಸಲ್ಲಿಸುತ್ತದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ. ತಮ್ಮ ೩ ದಿನಗಳ ದಕ್ಷಿಣ ಕೊರಿಯಾ ಭೇಟಿಯ ೩ನೇ ಹಂತದಲ್ಲಿ ಸಚಿವರು

ಮಾತನಾಡಿದರು. ಹಡಗು ನಿರ್ಮಾಣದಲ್ಲಿ ತಾಂತ್ರಿಕ ಪರಿಣತಿ ಮತ್ತು ಅನುಭವವನ್ನು ಕೊರಿಯಾ ಹೊಂದಿದೆ, ಆದರೆ ಭಾರತವು ಬಲವಾದ ಬೇಡಿಕೆ, ಕೌಶಲ್ಯಪೂರ್ಣ ಮಾನವಶಕ್ತಿ ಮತ್ತು ಬೆಂಬಲಿತ ನೀತಿಗಳನ್ನು ನೀಡುತ್ತಿದೆ. ಅದು ಗೆಲುವಿನ ಪಾಲುದಾರಿಕೆಗೆ ಕಾರಣವಾಗಬಹುದು ಎಂದು ಅವರು ಹೇಳಿದರು. ಇಂತಹ ಸಹಯೋಗದ ವ್ಯವಸ್ಥೆಗಳ ಅಡಿಯಲ್ಲಿ ನಿರ್ಮಿಸಲಾದ ಹಡಗುಗಳು ಐದು ವರ್ಷಗಳಲ್ಲಿ ಭರಿಸಿದ ವೆಚ್ಚವನ್ನು ಮರುಪಡೆಯಲು ಸಮರ್ಥವಾಗಿವೆ ಮತ್ತು ಭಾರತವನ್ನು ಪ್ರಮುಖ ಜಾಗತಿಕ ಕಡಲ ಕೇಂದ್ರವಾಗಿಸಲು ಶಕ್ತವಾಗಿವೆ ಎಂದು ಸಚಿವರು ತಿಳಿಸಿದರು.

<><><><>

ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಿನ ಟೆಸ್ಟ್ ಕ್ರಿಕೆಟ್ ಸರಣಿಯ ಮೊದಲ ಪಂದ್ಯದ ಎರಡನೇ ದಿನದಾಟದಲ್ಲಿ ನಿನ್ನೆ ಭಾರತ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೧೮೯ ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಎರಡನೇ ಇನ್ನಿಂಗ್ಸ್ ಆರಂಭಿಸಿರುವ ದಕ್ಷಿಣ ಆಫ್ರಿಕಾ ದಿನದಾಟದ ಅಂತ್ಯಕ್ಕೆ ೭ ವಿಕೆಟ್‌ಗಳಿಗೆ ೯೩ ರನ್ ಗಳಿಸಿದೆ. ಇಂದು ಮೂರನೇ ದಿನದಾಟ ಮುಂದುವರೆಯಲಿದ್ದು, ದಕ್ಷಿಣ ಆಫ್ರಿಕಾ ತಂಡ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೧೫೯ ರನ್ ಗಳಿಸಿದೆ.

<><><><>

ಗೋವಾದ ಅರ್ಪೋರಾದಲ್ಲಿ ನಡೆಯುತ್ತಿರುವ ಫಿಡೆ ಚೆಸ್ ವಿಶ್ವಕಪ್ ೨೦೨೫ರ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದ ಮೊದಲ ಭಾರತೀಯ ಮತ್ತು ಒಟ್ಟಾರೆಯಾಗಿ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ, ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಎರಿಗೈಸಿ ಪಾತ್ರರಾಗಿದ್ದಾರೆ. ನಿನ್ನೆ ನಡೆದ ಪಂದ್ಯದಲ್ಲಿ ಎರಡು ಬಾರಿಯ ವಿಶ್ವಕಪ್ ಚಾಂಪಿಯನ್ ಲೆವೊನ್ ಅರೋನಿಯನ್ ಅವರನ್ನು ಸೋಲಿಸುವ ಮೂಲಕ ಅರ್ಜುನ್ ಈ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅರ್ಜುನ್ ಜೊತೆಗೆ ವಿಶ್ವಕಪ್‌ನ ೫ನೇ ಸುತ್ತಿಗೆ ತಲುಪಿದ ಏಕೈಕ ಭಾರತೀಯ ಪೆಂಟಾಲ ಹರಿಕೃಷ್ಣ, ತಮ್ಮ ಮೊದಲ ಪಂದ್ಯದಲ್ಲಿ ಡ್ರಾ ಸಾಧಿಸಿದ ನಂತರ ಜೋಸ್ ಮಾರ್ಟಿನೆಜ್ ವಿರುದ್ಧ ತಮ್ಮ ಎರಡನೇ ಕ್ಲಾಸಿಕಲ್ ಪಂದ್ಯವನ್ನು ಡ್ರಾ ಮಾಡಿಕೊಂಡಿದ್ದಾರೆ. ಈ ಜೋಡಿ ಇಂದು ಟೈಬ್ರೇಕ್‌ಗಳಿಗೆ ಹೋಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>

<><>ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <><>